ಖಾಸಗಿ ರಕ್ತ ಬ್ಯಾಂಕ್‌ಗಳಲ್ಲಿ ರಕ್ತ ತೆಗೆಯಲು ಅನುಮತಿ

2880 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಡೀ ರಾಷ್ಟ್ರದಲ್ಲಿಯೇ ಖಾಸಗಿ ಆಸ್ಪತ್ರೆಗಳಲ್ಲಿ ರಕ್ತ ಸಂಗ್ರಹಿಸುವುದನ್ನು ಸರ್ವೋಚ್ಚ ನ್ಯಾಯಾಲಯ ರದ್ದುಗೊಳಿಸಿದ್ದು ಹಾಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಮಾತ್ರ ರಕ್ತ ಸಂಗ್ರಹಿಸುತ್ತಿರುವುದು ಸರ್ಕಾರದ ಗಮನದಲ್ಲಿದಿಯೇ?

ಆ) ಈ ತೀರ್ಪಿನಿಂದ ಇಡೀ ರಾಜ್ಯದ ಜನತೆಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದಲ್ಲಿ ಸರ್ಕಾರ ಕೈಗೊಂಡ ಪರ್ಯಾಯ ವ್ಯವಸ್ಥೆಗಳೇನು?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಸರ್ವೋಚ್ಚ ನ್ಯಾಯಾಲಯವು ಖಾಸಗಿ ಆಸ್ಪತ್ರೆಯಲ್ಲಿ ರಕ್ತ ಸಂಗ್ರಹಿಸುವುದನ್ನು ರದ್ದು ಪಡಿಸಿರುವುದಿಲ್ಲ.

ಆ) ಪರವಾನಗಿಯನ್ನು ಪಡೆದು ಖಾಸಗಿ ರಕ್ತ ನಿಧಿಯನ್ನು ಸ್ಥಾಪಿಸಬಹುದಾಗಿದೆ.

ಇ) ಈ ತೊಂದರೆಯನ್ನು ನಿವಾರಿಸಲು ಎಲ್ಲಾ ಬೋಧಕ ಆಸ್ಪತ್ರೆಗಳಲ್ಲೂ, ಜಿಲ್ಲಾ ಆಸ್ಪತ್ರೆಗಳಲ್ಲೂ, ಪ್ರಮುಖ ಸಾರ್ವಜನಿಕ ಆಸ್ಪತ್ರೆಗಳಲ್ಲೂ ಮತ್ತು ಪ್ರಮುಖ ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲೂ ರಕ್ತ ನಿಧಿಗಳನ್ನು ಸ್ಥಾಪಿಸಲಾಗುತ್ತಿದೆ.

ಪರವಾನಗಿ ಪಡೆದ ರಕ್ತ ನಿಧಿಗಳು ಇತರೆ ಆಸ್ಪತ್ರೆಗಳಲ್ಲಿ ಇರುವ (ತಾಲ್ಲೂಕು ಮಟ್ಟದ ಆಸ್ಪತ್ರೆಯು ಸೇರಿದಂತೆ) ನಿರ್ದಿಷ್ಟ ರೋಗಿಯ ಬೇಡಿಕೆಯನ್ನು ಪೂರೈಸಲು ರಕ್ತವನ್ನು ಸರಬರಾಜು ಮಾಡಲು ನಿಷೇಧ ಇರುವುದಿಲ್ಲ.

ಮೊಳಕಾಲ್ಮೂರು ಕ್ಷೇತ್ರದಲ್ಲಿರುವ ಅರಣ್ಯ ಭೂಮಿ ಕುರಿತು

2882- ಶ್ರೀ ಎನ್.ವೈ. ಗೋಪಾಲಕೃಷ್ಣ (ಮೊಳಕಾಲ್ಮೂರು) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೊಳಕಾಲ್ಮೂರು ವಿಧಾನ ಸಭಾ ಕ್ಷೇತ್ರದಲ್ಲಿ ಇರತಕ್ಕ ಅರಣ್ಯ ಭೂಮಿ ಎಷ್ಟು?

ಆ) ಈ ಎಲ್ಲಾ ಅರಣ್ಯ ಭೂಮಿಯನ್ನು ಅರಣ್ಯ ಇಲಾಖೆ ಉಪಯೋಗಿಸುತ್ತಿದೆಯೇ?

ಇ) ಈ ಅರಣ್ಯ ಭೂಮಿಯಲ್ಲಿ ಒತ್ತುವರಿಯಾಗಿರತಕ್ಕ ಭೂಮಿ ಎಷ್ಟು?

ಈ) ಅರಣ್ಯ ಇಲಾಖೆಯು ಉಪಯೋಗಿಸದೇ ಇರತಕ್ಕ ಅರಣ್ಯ ಭೂಮಿ ಎಷ್ಟು?

ಉ) ಈ ಭೂಮಿಯನ್ನು ಭೂ ರಹಿತರಿಗೆ ನೀಡಲು ಸರ್ಕಾರ ಉದ್ದೇಶಿಸಿದೆಯೇ?